# ಕಾವ್ಯಚಿತ್ರಗಳು



**ಸಿ.ವಿ. ಶೇಷಾದ್ರಿ ಹೊಳವನಹಳ್ಳಿ**

ಕಲೆ: ಜಬೀವುಲ್ಲಾ ಎಂ. ಅಸದ್

### ಪ್ರಿಂಟ್

ಹೆದರಿಸುವ ಕಾಯಿಲೆಯ ಅಡ್ವಟೈಜ್ ಕೇಳಿಸಿಕೊಳ್ಳಬಾರದೆಂದು ನಾನೇ ಜೋರಾಗಿ ಹಾಡು ಹೇಳಿಕೊಳ್ಳುತ್ತಿದ್ದೆ. ನೀನು ನನ್ನ ನಡೆದ ಕಥೆ ಹೇಳಲು ನನ್ನೆದುರು ನಿಂತೆ. ನಾನು ಕಾಯಿಲೆ ಮತ್ತು ಹಾಡಿನ ಗುಂಗಿನಲ್ಲಿದ್ದೆ. ನೀನು ಏನು ತಿಳಿದೆಯೋ ತಿಳಿಯಲಿಲ್ಲ. ಆಮೇಲೆ ನೀನು ನಿನ್ನ ಮೊಬೈಲ್ ಮುಟ್ಟಿ ಸಂದೇಶಗಳನು ನೋಡಿಕೊಳ್ಳತೊಡಗಿದೆ. ನನ್ನ ಬಳಿ ಮೊಬೈಲ್ ಇಲ್ಲ. ನನಗೆ ಮನುಷ್ಯನೇ ಮೊಬೈಲ್ ಆಗಿ ಕಾಣಿಸುತ್ತಾನೆ. ಅವನೂ ನನಗೆ ಸಂದೇಶ ಕಳುಹಿಸುತ್ತಿರುತ್ತಾನೆ. ಅವನ ಒಂದೊಂದೇ ಸಂದೇಶ ನೋಡತೊಡಗಿದೆ. ಅವು ಪ್ರಪಂಚದ ಎಲ್ಲ ಭಾಷೆಗಳಲ್ಲಿದ್ದವು. ಆ ಎಲ್ಲ ಭಾಷೆಗಳನ್ನು ತರ್ಜುಮೆ ಮಾಡುವ ಸಂವೇದನೆಯ ಸಾಫ್ಟ್‌ವೇರ್ ನನ್ನ ಬಳಿ ಇದೆ. ಅದೆಲ್ಲ ನನ್ನ ಭಾಷೆಗೆ ತರ್ಜುಮೆ ಮಾಡುತ್ತದೆ. ಅದನ್ನು ಪ್ರಿಂಟ್ ಮಾಡಿ ನಿನಗೆ ತೋರಿಸೋಣ ಎಂದುಕೊಂಡೆ. ನಾನು ಪ್ರಿಂಟ್ ಎಂದು ಒತ್ತುವಷ್ಟರಲ್ಲಿ ಅವು ಬೇರೆಲ್ಲೋ ಪ್ರಿಂಟ್ ಆಗಿದ್ದವು. ಎಲ್ಲಿ ಎಂದು ಕಾಣಲಿಲ್ಲ. ಸಿಗ್ನಲ್ ಹಿಡಿದುಕೊಂಡು ಈಚೆ ಬಂದೆ. ಗಾಳಿಯಲಿ ಎಲೆಗಳು ಹಾರಾಡುತ್ತಿದ್ದವು. ಏನೂ ಅರಿಯದ ಮಕ್ಕಳು ಅವುಗಳನ್ನು ಹಿಡಿಯಲು ಕೈ ಚಾಚುತ್ತಿದ್ದರು. ಆ ಕೈಗಳನ್ನೆಲ್ಲ ಕರೆದೆ, ಬಂದವು. ಗಾಳಿಯಲಿ ಹಾರಿಬಂದ ಹಾಳೆಯೊಂದನ್ನು ಆ ಕೈಗಳಿಗೆ ಕೊಟ್ಟೆ. ಆ ಕೈಗಳು ಹಾಳೆಮೇಲೆ ಮುದ್ರೆಯೊತ್ತಿದವು. ನನಗೆ ವಾಪಸ್ಸು ಕೊಟ್ಟು ಆಟ ಆಡಲು ಹೊರಟು ಹೋದವು. ನಾನು ಆ ಮುದ್ರೆ ನೋಡಿದೆ. ಅದರಲ್ಲಿ ಚಿತ್ರವೊಂದು ಪ್ರಿಂಟಾಗಿತ್ತು. ಜಗತ್ತಿನ ಜನರೆಲ್ಲ ತಾವು ಮಾಡಿದ್ದನ್ನು ತಾವೇ ಉಣ್ಣುತ್ತಿದ್ದ ಚಿತ್ರ ಅದಾಗಿತ್ತು.

* * *

### ನಕ್ಷತ್ರಗಳು ಕಾಣಲಿಲ್ಲ

ತಲೆ ಎತ್ತಿ ನೋಡಿ ನೋಡಿ ಸುಸ್ತಾದೆ. ಬೀದಿ ದೀಪಕ್ಕೆ ಕೈ ಅಡ್ಡ ಇಟ್ಟು ನೋಡಿದರೂ ಕಾಣುತ್ತಿಲ್ಲ. ದೊಡ್ಡ ದೊಡ್ಡ ನಗರಗಳ ಗಗನಚುಂಬಿ ಕಟ್ಟಡಗಳನ್ನೆಲ್ಲ ಹತ್ತಿ ನೋಡಿದೆ. ಒಂದು ನಕ್ಷತ್ರವೂ ಕಾಣುತ್ತಿಲ್ಲ. ಯಾರೋ ಜೋರು ಜೋರಾಗಿ ಕಿರುಚುತ್ತಿದ್ದರು. ಕೆಳಗೆ ಟ್ಯೂಬು ಲೈಟು ಬೆಳಕಲ್ಲಿ ಆಟ ಆಡುತ್ತಿದ್ದ ಮಕ್ಕಳ ಮೇಲೆ ಬೇರೆ ಭಾಷೆಯ ದಪ್ಪ ದಪ್ಪ ಪುಸ್ತಕಗಳನ್ನು ಎಸೆಯಲಾಗುತ್ತಿತ್ತು. ಹೋಲಿಕೆಗಳಿಂದ ಹೊಸೆದ ಚಾವಟಿಗಳಿಂದ ಛಟೀರೆಂದು ಹೊಡೆಯಲಾಗುತ್ತಿತ್ತು. ಒಬ್ಬಳಂತೂ ತನ್ನ ಮಗುವಿಗೆ ಇಂಗ್ಲಿಷಿನಲ್ಲಿ ಬೈಯುತ್ತ ಇಂಕು ಎರಚುತ್ತಿದ್ದಳು. ಏಕೆ, ಏನಾಯ್ತು